ಶ್ರೀ ಗೋರಕ್ಷಣಿ
GORAKSHANA

ಸಂಚಿಕೆ 5 30-12-1950

ಬಿಡಿ ಪ್ರತಿ ಮೂರು ಪೈ

ತಿಂಗಳಿಗೊಂದಾವರ್ತಿ

ಗೋ ಸೇವೆ ಕುರಿತು ಡಾ. ರಾಜೇಂದ್ರರ ಭಾಷಣ

[ಕಳೆದ ಸಂಚಿಕೆಯಿಂದ]

ನಮ್ಮ ಇಲ್ಲಿನ ಅರ್ಥ ಶಾಸ್ತ್ರಜ್ಞರು ಪಶುಗಳ ವಿಷಯದಲ್ಲಿ ಈ ಬಗೆಯಲ್ಲಿಯೇ ಯೋಚಿಸಿರುವರು. ನಮ್ಮ ಇಲ್ಲಿನ ಪಶುಗಳ ಸಂಖ್ಯೆಯು ಹೆಚ್ಚುತ್ತಿರುವುದರಿಂದ ಅಧಿಕವಾಗಿರುವ ಪಶುಗಳನ್ನು ಕೊಂದುಹಾಕಿ ಬಿಡಿ ಎಂದು ಅರ್ಥಶಾಸ್ತ್ರಗಳು ಹೇಳ ತಕ್ಕಾರೆ ಹೀಗೆ ಹೇಳುವಿಕೆಯಲ್ಲಿ ಪುರ ಪಾರ್ಥವೂ ಇಲ್ಲ ಬುದ್ಧಿವಂತಿಕೆಯೂ ಇಲ್ಲ. ಹಿಂದಿನ ಮಹಾ ಯುದ್ಧದಲ್ಲಿ ಸೇನೆಗಾಗಿ ಅನೇಕ ಪಶುಗಳು ಹತ್ಯಮಾಡಲ್ಪಟ್ಟವು. ಆದರೆ ನಮ್ಮ ಅರ್ಥ ಶಾಸ್ತ್ರಯು ಇದೇ ಬಗೆಯ ಪ್ರಯೋಜನವನ್ನು ಮಾಡಲಿಳಿಸಿದಲ್ಲಿ ಅವನಿಂದ ಆ ಕೆಲಸವನ್ನು ಮಾಡಲಕೆಗುವುದಿಲ್ಲ ಇಂದು ಹಿಂದೂಸ್ಥಾನದ ಕಿಸಾನರು ಎತ್ತುಗಳನ್ನು ಖರೀದಿ ಮಾಡುವ ಸ್ಥಿತಿಯಲ್ಲಿಲ್ಲ. ಖರೀದಿ ಮಾಡಿದರೂ ಕೂಡ ಅವರ ಋಣವು ಹೆಚ್ಚುತ್ತಾ ಬರುತ್ತದೆ ಒಂದು ಕಡೆ ಹೆಚ್ಚು ಆಹಾರವನ್ನು ಬೆಳೆಸಿರಿ ಎಂಬ ಕೂಗು ಕೇಳಿಸುತ್ತಿದೆ ಎಂಡ ಸೆಯು ಕಡೆ ಪಶುಗಳ ನಾಶವಾಗುತ್ತಿದೆ ಎತ್ತುಗಳಿಂದ ನಾವು ಸುಲಭವಾಗಿ ಕೆಲಸವನ್ನು ತೆಗೆದುಕೊಂಡಲ್ಲಿ ಅವು ಉತ್ತಮ ತಳಿಗಳನ್ನು ನಿರ್ಮಿಸಬಲ್ಲವು ಶಾಸ್ತ್ರಜ್ಞರು ಏನು ಹೇಳುವರೆಂದರೆ—ಹಿಂದೂಸ್ಥಾನದ ಪಶುಗಳಿಂದ ಹಿಂದೂಸ್ಥಾನಕ್ಕೆ ಅದರಿಂದ ಎಂಡು ಸಾವಿರ ಕೋಟಿ ರೂಪಾಯಿಗಳ ಲಾಭವು ಅವುಗಳ ಪರಿಶ್ರಮದ ಮೂಲಕ ಲಭಿಸುತ್ತದೆ ಈ ಪೊತ್ತದಲ್ಲಿ ಹಾಲು ಮೊಸರು ಬೆಣ್ಣೆ ಮೊದಲಾದುವುಗಳ ಬೆಲೆಯೂ ಶೇರಿದೆ. ಪಶುಗಳ ಭರಣ, ಪೋಷಣಗಳ ವಿಷಯದಲ್ಲಿ ಉಚಿತ ಪ್ರಬಂಧವನ್ನು ಮಾಡಿದಲ್ಲಿ ಮತ್ತು ಅವುಗಳಿಂದ ಸರಿಯಾದ ರೀತಿಯಲ್ಲಿ ಕೆಲಸಗಳನ್ನು ತೆಗೆದುಕೊಂಡಲ್ಲಿ ಇದಕ್ಕಿಂತ ಹೆಚ್ಚು ಅದಾಯವನ್ನು ಪಡೆಯಬಹುದಾಗಿದೆ. ಇಲ್ಲಿನ ಗೋವುಗಳು ಮೂರು ಸೇರಿನಂತೆ ಹಿಂದೆ ಕೊಡುತ್ತಿದ್ದುವು. ಅವುಗಳಿಗೆ ಒಳ್ಳೆ ಆಹಾರವನ್ನು ಕೊಡುವಿಕೆಯಿಂದ ಈಗ 8-10 ಶೇರುಗಳಷ್ಟು ಕೊಡುತ್ತವೆ ಇದು ನಾನು ಪ್ರತ್ಯಕ್ಷವಾಗಿ ಕಂಡಿರುವ ವಿಷಯ. ಆಹಾರದ ಉತ್ಕೃಷ್ಟತೆಯಿಂದ ಹಾಲಿನ ಪ್ರಮಾಣವೂ ಹೆಚ್ಚುತ್ತದೆ. ಇದಕ್ಕಾಗಿ ಹೊರಗಿನಿಂದ ಇತರ ದೇಶದ ಎತ್ತುಗಳನ್ನು ತರಬೇಕಾಗಿಲ್ಲ ಅವುಗಳ ಪಾಲನೆ ಪೋಷಣೆಗಳು ಉತ್ತಮವಾಗಿದ್ದಲ್ಲಿ ಅವುಗಳಿಂದ ಹೆಚ್ಚು ಕೆಲಸವನ್ನೂ ತೆಗೆಯಲಾಗುತ್ತದೆ. ನಾವು ಈ ವಿಷಯದ ಅಧ್ಯಯನವನ್ನು ಶಾಸ್ತ್ರೀಯವಾಗಿ ಮಾಡಬೇಕಾಗಿದೆ ಕೇವಲ ಪುಸ್ತಕ ಜ್ಞಾನದಿಂದ ಲಾಭವಿಲ್ಲ. ನಮ್ಮ ಅನುಭವಗಳ ಮೇಲೆ ಭವಿಷ್ಯವನ್ನಿಟ್ಟಲ್ಲಿ ಪಶು ಸೃಷ್ಟಿಯು ನನಗೆ ಭಾರರೂಪವಾಗುವುದಿಲ್ಲ. ಇಂದು ಪಶುಗಳ ಪಾಲನೆಗಿಂತ ಪಶುಹತ್ಯೆಯೇ ಹೆಚ್ಚು ಸುಲಭವಾದುದೆಂದು ಎಣಿಸಲ್ಪಟ್ಟಿದೆ ಇದಕ್ಕೆ ಕಾರಣವು ಮಾಂಸವು ದೊರೆಯುವುದೆಂಬ ಮಾತೇ ಅಲ್ಲ. ತೊಗಲು ಮತ್ತು ಎಲುಬುಗಳಿಂದ ಕೂಡ ಹೆಚ್ಚು ಲಾಭವು ಬರುತ್ತದೆ.

ಹಿಂದೂ ಮುಸಲ್ಮಾನರಲ್ಲಿ ಗೋವುಗಳ ವಿಷಯದಲ್ಲಿ ಸದಾ ಜಗಳಗಳು ಆಗುತ್ತಿರುತ್ತವೆ ; ಆದರೆ ನಾವು ಕೇವಲ ಪಸುಸ್ಯಂ ಲಾಭ ಹಾನಿಗಳ ದೃಷ್ಟಿಯಲ್ಲಿ ಯೋಚಿಸಿ ನೋಡಿದಲ್ಲಿ ಕೂಡ ಎಲ್ಲಾ ವಿವೇಚನಾಪರರು ಈ ಸ್ಪರ್ಶಯನ್ನು ಜಗಳಗಳಿಗೆ ಕಾರಣವಾಗಿ ಮಾಡದೆ ಒಗ್ಗಟ್ಟಿಗೆ ಸಾಧನವಾಗಿ ಮಾಡಬಲ್ಲವರಾಗುತ್ತಾರೆ.

ಯುದ್ಧಕ್ಕೆ ಪೂರ್ವದಲ್ಲಿ ಧಾರ್ಮಿಕ ಕಾರಣದಿಂದ ಅತ್ಯಲ್ಪ ಗೋವಧೆಯಾಗುತ್ತಿತ್ತು. ಮಾಂಸಕ್ಕಾಗಿಯೂ ಕೂಡ ಅತ್ಯಲ್ಪ ಗೋವುಗಳನ್ನು ವಧಿಸುತ್ತಿದ್ದರು : ಆ ಸಮಯದಲ್ಲಿ ಕೇವಲ ತೊಗಲುಗಾಗಿಯೇ ಗೋವಧೆಯಾಗುತ್ತಿತ್ತು : ಏಕೆಂದರೆ ಆಗ ಈ ಮಾಂಸಕ್ಕೆ ಹೆಚ್ಚು ಬೆಲೆ ಇರಲಿಲ್ಲ .... ನಾವು ಈ ಬಗೆಯಲ್ಲಿ ಗೋವಂಶವನ್ನು ಉತ್ತಮಗೊಳಿಸಬಹುದು ; ತನ್ಮೂಲಕ ನಮಗೆ ಬೇಕಾದಷ್ಟು ಹಾಲು ಸಿಗುವುದು ಮಾತ್ರವಲ್ಲದೆ ನಮ್ಮ ಗೋವುಗಳ ಮತ್ತು ಎತ್ತುಗಳ ರಕ್ಷಣೆಯೂ ಇಗುತ್ತದೆ. ಈ ವಿಷಯದಲ್ಲಿ ನಾವು ವಿದೇಶಗಳಲ್ಲಿ ನಡೆಯುವ ಪ್ರಯೋಗಗಳಿಂದಲೂ ಲಾಭವನ್ನು ಪಡೆಯಬಹುದು ನಾವು ಹಾಲು ಮತ್ತು ತುಪ್ಪಗಳ ಪ್ರಶ್ನೆಯನ್ನು ಸರಿಪಡಿಸಿದಲ್ಲಿ ಮತ್ತು ಗೋವಂಶದ ರಕ್ಷಣೆಗೆ ಪ್ರಬಂಧವನ್ನು ಮಾಡಿದಲ್ಲಿ ನಮ್ಮ ಜವಾನುಗಳ ಉನ್ನತಿಯು ಕೂಡ ಆಗುತ್ತದೆ.

ಜವಾನು, ಮನುಷ್ಯ, ಮತ್ತು ಗೋವಂಶ. ಈ ಮೂರಕ್ಕೆ ಬಹಳ ನಿಕಟವಾದ ಸಂಬಂಧವಿದೆ. ಜವಾನಿನಿಂದ ನಾವು ಸುಮ್ಮನೇ ತೆಗೆದುಕೊಳ್ಳುತ್ತಲೇ ಇದ್ದಲ್ಲಿ ಕೆಲವು ಕಾಲದಲ್ಲಿಯೇ ಅದು ಸಾರಹೀನವಾಗುತ್ತದೆ : ಆದರೆ ಅದಕ್ಕೆ ಸ್ವಲ್ಪವಾದರೂ ಕೊಡುತ್ತಿದ್ದಲ್ಲಿ ಅದರ ಉತ್ಪತ್ತಿಯು ಉತ್ತಮವಾಗಿಯೇ ಇರುತ್ತದೆ ಗೋವಿನಿಂದ ಯಾವ ಗೊಬ್ಬರ ದೊರೆಯುವುದೋ ಅದು ಜವಾನಿಗೆ ಅತಿ ಅವಶ್ಯಕವಾದದ್ದು ; ಅದು ಉತ್ಪತ್ತಿಯನ್ನು ಹೆಚ್ಚಿಸುವಂಥಾದ್ದಾಗಿದೆ ; ಸರಿಯಾಗಿ ವಿಚಾರಮಾಡಿ ನೋಡಿದಲ್ಲಿ ಗೋವಿನ ಪ್ರತಿ ಅಂಶವೂ ಉಪಯೋಗಿಯಾಗುದೆಂಬುದು ತಿಳಿಯಬರುತ್ತದೆ. ಗೋವುಗಳ ಮೂಳೆಗಳನ್ನು ವಿದೇಶಗಳಿಗೆ ಕಳುಹಿಸುತ್ತಾರೆ. ಅದುದರಿಂದ ಜವಾನಿಗೆ ಹೋಗಬೇಕಾದ ಪದಾರ್ಥಗಳು ಅನ್ಯಮಾರ್ಗದಲ್ಲಿ ಹೋಗುತ್ತಿವೆ ; ಜವಾನಿನ ಶಕ್ತಿಯು ಹೆಚ್ಚಿದಂತೆಲ್ಲಾ ಮನುಷ್ಯನ ಶಕ್ತಿಯೂ ಹೆಚ್ಚುತ್ತದೆ. ಇಂದು ಕೃತ್ರಿಮ ಗೊಬ್ಬರಗಳ ದೊಡ್ಡ ದೊಡ್ಡ ಕಾರ್ಖಾನೆಗಳ ಸ್ಥಾಪನೆಗೆ ಪ್ರಯತ್ನಗಳು ನಡೆಯುತ್ತಿವೆ ಈ ಕಾರ್ಖಾನೆಗಳಿಂದ ತಯಾರಾಗುವ ಗೊಬ್ಬರವು ರೈತರಿಗೆ ಸಿಗುವಂತೆ ಮಾಡಲು ಸರ್ಕಾರವೂ ಪ್ರಯತ್ನಿಸುತ್ತದೆ ; ಈ ಕೃತ್ರಿಮ ಗೊಬ್ಬರಂಗಳಿಂದ ಜವಾನಿಗೆ ಎಷ್ಟು ನಷ್ಟವಾಗುವುದೆಂಬುದನ್ನು ತಿಳಿಸುವುದು ವೈಜ್ಞಾನಿಕರ ಕೆಲಸವಾಗಿದೆ ; ಈ ಕೃತ್ರಿಮ ಗೊಬ್ಬರಂದಿಂದ ಜವಾನು ಸಟ್ಟುಹೋಗುತ್ತದೆ ಮತ್ತು ಒಂದು ಮಾಸಾನಂತರ ಅದರ ಉತ್ಪತ್ತಿಯು ಕಡಮೆಯಾಗುತ್ತದೆಂಬುದು ಗೃಹಸ್ಥ ಕಿಸಾನರ ಅನುಭವವಾಗಿದೆ. ಗೋವಿನ ಗೊಬ್ಬರವು ಹಿಂದಿನ ಕಾಲದಿಂದ ಉಪಯೋಗಕ್ಕೆ ಬಂದಿದೆ: ಅದರ ಉಪಯೋಗದಿಂದ ಜವಾನಿನ ಉತ್ಪತ್ತಿಯು ಖಾಯಂ ಆಗಿರುತ್ತದೆ. ಈ ದೃಷ್ಟಿಯಿಂದ ಗೋಪಾಲನೆಯ ಅವಶ್ಯಕತೆಯು ಇದೆ ಇಲ್ಲಿ ಯಾವ ಕಸ ಕಡ್ಡಿಗಳನ್ನೆಯೋ ಅವೂ ಗೊಬ್ಬರಕ್ಕೆ ಉಪಯೋಗವಾಗುತ್ತವೆ ಯಾವ ಪದಾರ್ಥಗಳಿಂದ ಇಂದು ನಮಗೆ ಕಷ್ಟವು ತೋರುತ್ತಿರುವುದೋ ಅವುಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗಪಡಿಸಿದಲ್ಲಿ ಅವುಗಳಿಂದ ನಾವು ಸುಖವನ್ನು ಹೊಂದಬಹುದಾಗಿದೆ. ಗೋಪಾಲನೆಯನ್ನು ನೋಡುವರು ಈ ವಿಷಯದಲ್ಲಿಯೂ ವಿಚಾರ ಮಾಡಬೇಕಾಗಿದೆ.

ನಾನು ವಾಸವಾಡುವ ಸ್ಥಳದಲ್ಲಿ ಗೋವುಗಳ ಸಂಖ್ಯೆಯು ಹೆಚ್ಚಾಗಿಯೇ ಇದೆ : ಆದರೆ ಅಂಥಾ ಸ್ಥಳದಲ್ಲಿಯೂ ಕೂಡ ಪೂಜೆ ಅಥವಾ ವ್ಯಾಧಿಗಳ ಚಿಕಿತ್ಸೆಗಾಗಿ ವಿಸಹಾ ಸಾಕಷ್ಟು ಗೋಘೃತವು ಸಿಗುವುದಿಲ್ಲ ; ಏಕೆಂದರೆ ಗೋ ಘೃತವೇ ಸಿಕ್ಕುವುದು ಹೆಚ್ಚು ಕಷ್ಟವಾಗಿರುತ್ತದೆ. ಈ ಕಾರಣದಿಂದಲೇ ನಾನು ಗೋ ಘೃತವನ್ನು ಮಾತ್ರವೇ ಬಳಸುವೆನೆಂಬ ವ್ರತವನ್ನು ಆಚರಿಸಲಾರದವನಾಗಿದ್ದೇನೆ.

[ಸಶೇಷ]

ಸರ್ದಾರ್ ಪಟೇಲರು

ಭಾರತದಿಂದ ಅದೃಶ್ಯವಾಗಿರುವುದರಿಂದ

ಭಾರತ ದೇಶಕ್ಕೆ ನಿಜವಾಗಿ ಸರ್ದಾರನು ಇಲ್ಲದಂತೆಯೇ ಸರಿ

1 ದೃಢ ಸಂಕಲ್ಪನು ಸರ್ದಾರ್. ಭಾರತ ರಾಜಕೀಯದಲ್ಲಿ ವಾಸ್ತವ ಶಾಂತಿಯೂ ಭದ್ರತೆ ಮಾಡಲಾಗದಂಥಾದ್ದು.

2 ಕಾಂಗ್ರೆಸ್ಸನ್ನು ತನ್ನ ಹತೋಟಿಯಲ್ಲಿಟ್ಟುಕೊಳ್ಳಬಲ್ಲ ಶಕ್ತಿಯು ಅತನಿಗಿತ್ತು.

3 ಭಾರತ ಸ್ವಾತಂತ್ರ್ಯಕ್ಕೆ ತನ್ನ ತನು, ಮನ, ಧನಗಳನ್ನು ಎಲ್ಲವನ್ನು ಧಾರೆಯೆರೆದವನು.

4 ಗಾಂಧೀಜೀ ದಂಡನಾಯಕರಲ್ಲಿ ಅಗ್ರಗಣ್ಯನು.

5 ಅತ್ಯ ನಿಗ್ರಹ, ದೃಢ ಸಂಕಲ್ಪ, ಕಾರ್ಯನಿರ್ವಾಹಕ ಸಾಮರ್ಥ್ಯ ಗಳನ್ನು ಹೊಂದಿದ್ದ ನೀತಿ ಚತುರನು.

6 ಚಾಣಕ್ಯ, ಕ್ರಾಮ್‌ವೆಲ್ ಮತ್ತು ಸ್ಯಾಲಿಸ್‌ಬರಿಗೆ ಸೋಲಿಸಬಲ್ಲವನು. ಭಾರತ ದೇಶದ ಉಕ್ಕಿನ ಮನುಷ್ಯನು.

7 ಪುರಾತನಾಚಾರಪ್ರಿಯನು, ಆದರೆ ಮತವಿಷಯದಲ್ಲಿ ಯಾವ ಬಗೆಯ ಶ್ರದ್ಧೆಯೂ ಇಲ್ಲದವನು : ಗಾಂಧೀಜಿಯ ಸೇನಾನಾಯಕನಾದರೂ ಗಾಂಧೀಜೀಯ ಭಗವದ್ಗೀತೆಯ ವ್ಯಾಖ್ಯಾನವನ್ನು ಒಂದು ಬಾರಿಯಾದರೂ ಓದುವ ಪಾಪಕ್ಕೆ ಹೋದವನಲ್ಲ.

8 ಭೌತಿಕವಾದಿ, ಪರಲೋಕದಲ್ಲಿ ನಂಬಿಕೆ ಇಲ್ಲದವನು

9 ನಿರಾಡಂಬರನು ; ತನ್ನ ಸರ್ವಸ್ವವನ್ನೂ ತ್ಯಾಗಮಾಡಿದವನು : ಅಪಾರ ಧನದ ಬೆಲೆಯನ್ನೂ ಅದರ ಅಧಿಕಾರ ಶಕ್ತಿಯನ್ನೂ ನಿರಾಕರಿಸಿದವನಲ್ಲ ; ಧನಪ್ರಭಾವಕ್ಕೆ ಅತೀತನು

10 ಆತ್ಮಸಂಯಮವುಳ್ಳವನು

11 ಕಾಂಗ್ರೆಸ್ಸಿನಲ್ಲಿ ಈತನನ್ನು ಕಂಡಲ್ಲಿ ಭಯಪಡುತ್ತಿದ್ದಷ್ಟು ಮತ್ತು ಯಾವ ನಾಯಕರಿಗೂ ಕಾಂಗ್ರೆಸ್ಸಿನವರು ಭಯಪಡುತ್ತಿದ್ದಿಲ್ಲ ; ಅತನ ಕಾರ್ಯನಿರ್ವಾಹಕ ಶಕ್ತಿಯು ಅಂತಹುದು

ನೋಹೋ — ಲಂಡನ್ನಿನ ಅಂತರಾಷ್ಟ್ರೀಯ ಕಾಲೋನಿ

ದಿವ್ಯವಾಣಿ

ಯಾವನೇರ್ವ ಅಧಿಪತಿ (ಅಧಿಕಾರಿ) ಕೈಗಳಲ್ಲಿ ರಾಜ್ಯಲಕ್ಷ್ಮಿಯು ಸ್ಥಿರವಾಗಿರಬೇಕಾದರೆ, ಅತನಲ್ಲಿ ಸತ್ಯ ಭೂತದಯೆ ವಿದ್ಯೆ ನೀತಿ (ವಿವೇಕ) ಪ್ರಯತ್ನ (ಹಟಶೂರತ್ವ) ಏಕಮತ್ಯ (ಒಮ್ಮತ-ಒಗ್ಗಟ್ಟು) ಇವುಗಳು ಸಮರಸವಾಗಿ ಓಲಾಡಕೊಂಡಿರತಕ್ಕದ್ದು. — ಆರ್ಯೋಕ್ತಿ

ಂ ಂ ಂ ಂ

ಸತ್ಯವೂ ಒಂದು ಕಲೆ, ಸತ್ಯದಲ್ಲಿ ಸೌಂದರ್ಯ ಅಡಗಿದೆ — ಕಾಂಡರ್ಡ್

ಸುಖದುಃಖ

ಸೆಸೇವದಿಂದ ಕಲಿಯುವ ಬುದ್ಧಿವಾದಗಳಾವುವು ?

— ನಿನಿಮಾ ನೋಡುವ ಬುದ್ಧಿಯು ವೃದ್ಧಿಯಾಗುವುದು.

ಂ ಂ ಂ ಂ

ಈಗೀಗ ಜಾತಿ ಕೇಳಿದೊಡನೆ ಪುರುಷ ಜಾತಿ ಅಥವಾ ಸ್ತ್ರೀ ಜಾತಿ ಎನ್ನುವರಲ್ಲ ! ನಿಮ್ಮ ಅಭಿಪ್ರಾಯವೂ ಇದೇ ತಾನೆ ?

— ನನ್ನ ಅಭಿಪ್ರಾಯದಲ್ಲಿ ಸ್ತ್ರೀ ಪುರುಷರ ಕರ್ತವ್ಯ ವಿಂಗಡಿಸುವ ಮೂರನೆಯ ಜಾತಿಯೊಂದಿದೆ [ಪ್ರಕಾಶ]

'ಗೋರಕ್ಷಣ'

ತಿಂಗಳಿಗೊಂದಾವರ್ತಿ ಪ್ರಕಟವಾಗುವ 'ಗೋರಕ್ಷಣ' ದಲ್ಲಿ ಗೋರಕ್ಷಣೆ ಪಾಲನೆದಯೆ, ಸಸ್ಯಾಹಾರ, ಪಶುವೈದ್ಯ, ಇವುಗಳನ್ನು ಕುರಿತಾದ ಲೇಖನಗಳು ಪ್ರಕಟಿಸಲ್ಪಡುವವು.

ಪತ್ರಿಕೆಗೆ ಪೋಷಕರಾಗಿಯೂ, ಚಂದಾದಾರರಾಗಿಯೂ, ಲೇಖಕರಾಗಿಯೂ ಪ್ರಚಾರಕರಾಗಿಯೂ ಸಹಕಾರ ನೀಡುವ ಮಹನೀಯರಿಗೆ ವಂದನೆಗಳು.

ಅನುಕೂಲವಾದಂತೆಲ್ಲಾ ಪುಟ ಸಂಖ್ಯೆ ಹೆಚ್ಚಿಸಲಾಗುತ್ತೆ.

ವಿಳಾಸ : 'ಗೋರಕ್ಷಣ' ಸತ್ಯವಾದಿ ಆಫೀಸ್, ಮೈಸೂರು

SHAKTI SUDHA

A Superb Tonic

ಐ. ಟಿ. ಎಲ್. ಗ್ರೈಪ್ ಸಿರಪ್

ನಿಮ್ಮ ಮುದ್ದು ಕಂದನ
ಅಜೀರ್ಣ ವ್ಯಾಧಿಗಳನ್ನು ತಡೆದು
ಆರೋಗ್ಯ ಕಾಪಾಡುವ ಅಮೃತವಾಣಿ

— ತಯಾರಕರು —

ದಿ ಮೈಸೂರು ಇಂಡಸ್ಟ್ರಿಯಲ್
ಅಂಡ್ ಟೆಸ್ಟಿಂಗ್ ಲ್ಯಾಬೊರೇಟರಿ
ಲಿಮಿಟೆಡ್

ಮಲ್ಲೇಶ್ವರಂ ಫೋನ್ಸ್, ಬೆಂಗಳೂರು 3

ಶ್ರೇಷ್ಠತೆಯ ಹೆಗ್ಗುರುತು

ಐ.ಟಿ.ಎಲ್ ಗ್ರೈಪ್ ಸಿರಪ್